ಅಂತರರಾಷ್ಟ್ರೀಯ ಚೆಸ್ ಚಾಂಪಿಯನ್‌ನನ್ನು ಎರಡು ನೇರ ಆಟಗಳಲ್ಲಿ ಸೋಲಿಸುವುದಾ?

'ಸರ್, ನಾನು ನಿಜ ಹೇಳ್ತಾ ಇರೋದು... ಅವರೇ ಕಾಲ್ ಮಾಡಿದ್ದರು...' ಅವನ ಮಾತುಗಳನ್ನು ಅಲ್ಲಿಯೇ ತಡೆಯುತ್ತಾ ನಾಗೇಶ್ ಅಲ್ಲಿ ಇದ್ದ ಕಾನ್‌ಸ್ಟೆಬಲ್‌ಗೆ ಕೃಷ್ಣನ್ ಮೊಬೈಲ್ ತರಲು ಹೇಳಿದ. ಅದು ಲಾಕ್ ಆಗಿತ್ತು.

'ಸರ್, ಅವರ ಬೆರಳ ಗುರುತಿನಿಂದ ತೆರೆದುಕೊಳ್ಳುತ್ತದೆ' ಅಂದಳು ಅವನ ಪತ್ನಿ.

ಮೊಬೈಲ್ ಆನ್ ಆಯಿತು. ನಾಗೇಶ್ ಕಾಲ್ ಲಿಸ್ಟ್ ಚೆಕ್ ಮಾಡಿದ... ಅಲ್ಲಿ ಯಾವ ಕಾಲ್ ಕೂಡಾ ಬೆಳಿಗ್ಗೆಯಿಂದ ಹೋಗಿರಲಿಲ್ಲ.

'ನಿಮ್ಮ ಆಟ ಸಾಕು ರಾಕೇಶ್, ಈ ಫೋನ್‌ನಲ್ಲಿ ಬೆಳಗ್ಗೆ ನಿಮಗೆ ಕಾಲ್ ಮಾಡಿರುವ ಯಾವ ಕುರುಹೂ ಇಲ್ಲ.'

ರಾಕೇಶ್ ದಿಗ್ಭ್ರಾಂತನಾದ. ಅವನ ಇಡೀ ದೇಹ ಬೆವರಿನಿಂದ ತೋಯ್ದಿತ್ತು. ಬಾಯಿಯಲ್ಲಿದ್ದ ತೇವವೆಲ್ಲ ಒಣಗಿತ್ತು, ಕೈ ಕಾಲಿನ ಶಕ್ತಿಯೆಲ್ಲ ಒಮ್ಮೆಲೇ ಸೋರಿಹೋದಂತೆ ಆಯಿತು.

